ಸರ್ಕಾರ ಕೈಗೊಳ್ಳಬೇಕೆಂದು ಆಗ್ರಹವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ವಿಧಾನ ಪರಿಷತ್ತಿನಲ್ಲಿದ್ದಾರೆ. ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರುವ ವಿಷಯವನ್ನು ಅವರ ಗಮನಕ್ಕೆ ತಂದು ಪ್ರಾಯಶಃ ಸೋಮವಾರದ ದಿವಸ ಉಚಿತವಾದ ಉತ್ತರವನ್ನು ನಾನು ಕೊಡಿಸುತ್ತೇನೆ.

(6) ವಿಷಯ :– ಮೈಸೂರು ನಗರದ ಕೆಲವು ಭಾಗಗಳಿಗೆ ನೀರನ್ನು ಕೊಡಿಸುವಂಥ ವ್ಯವಸ್ಥೆ ಕುರಿತು.

ಶ್ರೀ ಎಂ. ಆರ್. ಸೋಮಶೇಖರ್ (ಕೃಷ್ಣರಾಜ) :– ಮಾನ್ಯ ಅಧ್ಯಕ್ಷರೆ, ಮೇಳಾಪುರ 2 ನೇ ಹಂತದ ಯೋಜನೆ ಮೈಸೂರು ನಗರಕ್ಕೆ ಬಂತು. ಅಲ್ಲಿಂದಲೂ ಕೂಡ 11 ಎಂಜಿಡಿ ನೀರು ಬರುವಂಥ ಒಂದು ವ್ಯವಸ್ಥೆಯಾಗಿದೆ. ಅದು ಅಲ್ಲದೇ ಈಗ K.R.S. ನಲ್ಲಿ ನೀರು ತುಂಬಿದೆ. ಒಟ್ಟು 47 ಎಂಜಿಡಿ ನೀರಿನಲ್ಲಿ 33 ಎಂಜಿಡಿ ನೀರು ಮೈಸೂರು ನಗರಕ್ಕೆ ದೊರೆಯುತ್ತಿದೆ. ಇನ್ನು ಮಿಕ್ಕಿದ ನೀರು ಸೋರಿಕೆಯಾಗುತ್ತಿದೆ. ಅದು ಅಲ್ಲದೇ ಈಗ 11 ಎಂಜಿಡಿ ನೀರು ಹೊಸದಾಗಿ ಬಂದಿದ್ದರೂ ಕೂಡ ನಗರದಲ್ಲಿ ನೀರಿನ ಸಮಸ್ಯೆ ಅಗಾಧವಾಗಿದೆ. 8–8 ದಿವಸವಾದರೂ ಕೆಲವೊಂದು ಏರಿಯಾಗಳಲ್ಲಿ ನೀರನ್ನು ಕೊಟ್ಟಿಲ್ಲ. ಕೃಷ್ಣಮೂರ್ತಿಪುರಂ, ವಿದ್ಯಾರಣ್ಯಪುರಂ, ಅಶೋಕಪುರಂ ಇಂತಹ ಕಡೆ ನೀರನ್ನು ಕೊಟ್ಟಿಲ್ಲ. ನಗರದ ಮಂಡಿಮೊಹಲ್ಲಾ ಇಂತಹ ಕಡೆ 8 ದಿವಸಕ್ಕೆ ಒಂದು ಸಲ ನೀರು ಕೊಡುವಂಥ ಒಂದು ವ್ಯವಸ್ಥೆ. ಅನೇಕ ಕಡೆಗಳಲ್ಲಿ ನೀರಿನ ಸಮಸ್ಯೆ ಅಗಾಧವಾಗಿದೆ. ಜನಗಳು ಬಹಳ ಪರಿತಪಿಸುತ್ತಿದ್ದಾರೆ. ನೀರು ಇದ್ದರೂ ಕೂಡ ಕೊಡಲಾಗದ ಅಲ್ಲಿಯ ಅಧಿಕಾರಿಗಳು ಸರಿಯಾಗಿ ಆಡಳಿತವನ್ನು ನಡೆಸುವುದಕ್ಕೆ ಆಗದೇ ಜನಗಳಿಗೆ ನೀರನ್ನು ಕೊಡುತ್ತಿಲ್ಲ. ದಯಮಾಡಿ ಇದಕ್ಕೆ ಗಮನವನ್ನು ಹರಿಸಿ ಮೈಸೂರು ನಗರಕ್ಕೆ ನೀರನ್ನು ಕೊಡಿಸುವಂಥ ಒಂದು ವ್ಯವಸ್ಥೆಯನ್ನು ಮಾಡಿಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಅಧ್ಯಕ್ಷರೆ,

ಮೈಸೂರು ನಗರದಲ್ಲಿ ಸದ್ಯದಲ್ಲಿ ದಿನ ಬಿಟ್ಟು ದಿನ ನೀರು ಸರಬರಾಜು ಮಾಡಲಾಗಿತ್ತಿದ್ದು, 8 ದಿನಕ್ಕೊಮ್ಮೆ ಮಾಡಲಾಗುತ್ತಿಲ್ಲ. ಮೈಸೂರು ನಗರಕ್ಕೆ 43 ಎಂಜಿಡಿ ನೀರಿನ ಅವಶ್ಯಕತೆ ಇದ್ದು, 38 ಎಂಜಿಡಿ ನೀರನ್ನು ಪಡೆದುಕೊಳ್ಳಲಾಗುತ್ತಿದೆ. ಇದರಲ್ಲಿ ಕೈಗಾರಿಕೆಗಳು, ನಗರ ಪಾಲಿಕೆಯ ವ್ಯಾಪ್ತಿಗೆ ಸೇರದ 6 ಗ್ರಾಮಗಳಿಗೆ ಸೇರಿ ಸುಮಾರು 6 ಎಂಜಿಡಿ ನೀರನ್ನು ಸರಬರಾಜು ಮಾಡುತ್ತಿದ್ದು, ಉಳಿಕೆ 32 ಎಂಜಿಡಿ ನೀರು ಮೈಸೂರಿನ ಜನತೆಗೆ ಕುಡಿಯುವ ನೀರಿಗಾಗಿ ಸರಬರಾಜಾಗುತ್ತಿದೆ. ಈ ನೀರನ್ನು ಮೈಸೂರು ನಗರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಡಾವಣೆಗಳಿಗೆ ಸರಬರಾಜು ಮಾಡಲಾಗುತ್ತಿದೆ. ಈ ರೀತಿ ದಿನ ಬಿಟ್ಟು ದಿನ ನೀರು ಸರಬರಾಜು ಮಾಡುವಾಗ ವಿದ್ಯುತ್ ವ್ಯತ್ಯಯ ಮತ್ತು ಪಂಪ್‌ಗಳು ದುರಸ್ಥಿಗೆ ಬಂದರೆ ಆ ದಿನ ನೀರು ಸರಬರಾಜು ಮಾಡಲು ತೊಂದರೆಯುಂಟಾಗುತ್ತದೆ.

ಮೇಳಾಪುರ 2 ನೇ ಹಂತದಿಂದ ಸುಮಾರು 11 ಎಂಜಿದಿ ನೀರನ್ನು ಪಡೆಯುವ ಯೋಜನೆ ಕಳೆದ ಮೇ ತಿಂಗಳಿನಲ್ಲಿ ಪ್ರಾರಂಭಿಸಿದ್ದು, ಈ ಯೋಜನೆಯಲ್ಲಿ 2 ಸೇಫ್ಟಿವಾಲ್ವ್‌ಗಳನ್ನು ಅಳವಡಿಸುವ ಕಾರ್ಯ ಬಾಕಿ ಇದ್ದು, ಈ ಕಾರ್ಯವನ್ನು ಹತ್ತು ದಿನಗಳಲ್ಲಿ ಮುಗಿಸಲಾಗುವುದು. ಈ ಯೋಜನೆಯಿಂದ ಸಧ್ಯ ಶೇಕಡ 50 ರಷ್ಟು ನೀರು ಮಾತ್ರ ಸರಬರಾಜಾಗುತ್ತಿದೆ. ಸೇಫ್ಟಿವಾಲ್ವ್‌ಗಳನ್ನು ಅಳವಡಿಸಿದ ನಂತರ ಪೂರ್ಣ ಪ್ರಮಾಣದ ನೀರು ಸರಬರಾಜು ಆಗುವುದು.

ಮೈಸೂರು ನಗರದಲ್ಲಿ 40–50 ವರ್ಷಗಳಷ್ಟು ಹಳೆಯದಾದ ನೀರು ವಿತರಣಾ ಜಾಲಗಳಿದ್ದು, ನೀರು ಸಮ ಪ್ರಮಾಣದಲ್ಲಿ ಹರಿಯುವುದಿಲ್ಲ. ಬಹುತೇಕ ಪ್ರದೇಶಗಳಲ್ಲಿ ಏರು ಕೊಳವೆಯಿಂದ ನೇರವಾಗಿ ನೀರು ಸರಬರಾಜು ಮಾಡುತ್ತಿದ್ದು, ವಿದ್ಯುತ್ ವ್ಯತ್ಯಯ ಮತ್ತು ಪಂಪ್‌ಗಳು ಕೆಟ್ಟುಹೋದಾಗ ನೀರುಸರಬರಾಜಿನಲ್ಲಿ ವ್ಯತ್ಯಯ ಉಂಟಾಗುತ್ತಿದೆ. ನೀರು ವಿತರಣಾ ಸಮಸ್ಯೆಯನ್ನು ಬಗೆಹರಿಸಲು ಮೈಸೂರು ನಗರಕ್ಕೆ ಹೊಸದಾಗಿ ವಿತರಣಾ ಜಾಲವನ್ನು ಹೊಸದಾಗಿ ಪುನರ್ ವಿನ್ಯಾಸಗೊಳಿಸಲು ಜವಾಹರಲಾಲ್ ನೆಹರೂ ರಾಷ್ಟ್ರೀಯ ನಗರ ಪುನರುಜ್ಜೀವನ ಯೋಜನೆಯಡಿಯಲ್ಲಿ ಕ್ರಮ ಕೈಗೊಂಡಿದ್ದು, ಈ ಯೋಜನೆಗಾಗಿ 194.54 ಕೋಟಿ ರೂಪಾಯಿಗಳ ಯೋಜನೆಗೆ ಅನುಮೋದನೆ ಬೊರೆತಿದ್ದು, ಇದರಲ್ಲಿ ರೂ. 31.6 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ. ಈ ಯೋಜನೆಯ ಕಾರ್ಯವನ್ನು 4 ಪ್ಯಾಕೇಜ್‌ಗಳಲ್ಲಿ ಕಾರ್ಯಗತಗೊಳಿಸಲು ಕ್ರಮ ಕೈಗೊಂಡಿದ್ದು, 3 ಪ್ಯಾಕೇಜ್‌ಗಳಿಗೆ ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ಈ ಯೋಜನೆ ಅನುಷ್ಠಾನಗೊಂಡ ನಂತರ ಮೈಸೂರು

ಜನತೆಗೆ ದಿನದ 24 ಗಂಟೆಯೂ ನೀರನ್ನು ಒದಗಿಸುವ ಯೋಜನೆಯಿದೆ. ಈ ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅನುಷ್ಠಾನಗೊಳಿಸುತ್ತಿದೆ.

ಶ್ರೀ ಎಂ. ಆರ್. ಸೋಮಶೇಖರ್ ಮಾನ್ಯ ಅಧ್ಯಕ್ಷರೆ, ಮೈಸೂರು ಜನರಿಗೆ ಸಾಕಾಗಿದೆ. ಆದರೆ ಅಲ್ಲಿ ನೀರನ್ನು ಸರಿಯಾಗಿ ವಿತರಣೆ ಮಾಡದಿರುವ ಅಧಿಕಾರಿಗಳಿಂದ ನಗರದಲ್ಲಿ ನೀರಿನ ಬವಣೆಯನ್ನು ಜನಗಳು ಅನುಭವಿಸುತ್ತಿದ್ದಾರೆ. ಕಳೆದ ಒಂದೆರಡು ವರ್ಷದಿಂದ ಜನರು ಇದೇ ಅವಸ್ಥೆಯನ್ನು ಅನುಭವಿಸುತ್ತಿದ್ದಾರೆ. ಅಧಿಕಾರಿಗಳು ಅಲ್ಲಿ ಸರಿಯಾದ ವ್ಯವಸ್ಥೆಯನ್ನು ಮಾಡಿದರೆ ಎಲ್ಲರಿಗೂ ನೀರನ್ನು ಕೊಡಬಹುದು. ನೀರನ್ನು ಕೊಡುತ್ತಿದ್ದಾರೆ, ಇಲ್ಲವೆಂದು ಅಲ್ಲ. ಅಧಿಕಾರಿಗಳು ಅಲ್ಲಿ ಸರಿಯಾಗಿ ಕೆಲಸವನ್ನು ಮಾಡಬೇಕಾಗಿದೆ. ಆ ದಿಕ್ಕಿನಲ್ಲಿ ಕಾರ್ಯೋನ್ಮುಖರಾಗುವಂತೆ ಸೂಚನೆ ಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ :– (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮುಖ್ಯ ಮಂತ್ರಿಗಳ ಪರವಾಗಿ :– ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಶಾಸಕರ ಅಭಿಪ್ರಾಯದಂತೆ, ಸರ್ಕಾರಿ ಅಧಿಕಾರಿಗಳಿಗೆ ನಿರ್ದೇಶನವನ್ನು ಕಳುಹಿಸಿಕೊಡಲಾಗುವುದು.

(7) **ವಿಷಯ** :– ತಿರುಪತಿ ಮಾದರಿ ವಿಶ್ರಾಂತಿ ಗೃಹ ಮಹಾರಾಷ್ಟ್ರದ ಪಂಡರಾಪುರದಲ್ಲಿ ನಿರ್ಮಿಸುವ ಬಗ್ಗೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸದಲಗ) :– ಮಾನ್ಯ ಅಧ್ಯಕ್ಷರೆ, ಮಾನ್ಯ ಧಾರ್ಮಿಕ ದತ್ತಿ ಸಚಿವರು ಹಾಗೂ ಕಂದಾಯ ಸಚಿವರು ಸದನದಲ್ಲಿ ಇದ್ದಾರೆ. ಮಹಾರಾಷ್ಟ್ರದ ಪಂಢರಪುರದ ದೇವಸ್ಥಾನದಲ್ಲಿ ಆಷಾಢ ಏಕಾದಶಿ ಮತ್ತು ಕಾರ್ತಿಕ ಮಾಸದಲ್ಲಿ ಎರಡು ಬೃಹತ್ ಪೂಜೆಗಳು ನಡೆಯುತ್ತವೆ. ಸಾಕಷ್ಟು ಜನ ಕರ್ನಾಟಕ ರಾಜ್ಯದಿಂದ, ಅದರಲ್ಲೂ ವಿಶೇಷವಾಗಿ ಬೆಳಗಾಂದಿಂದ ಹಾಗೂ ಗುಲ್ಬರ್ಗಾ ಜಿಲ್ಲೆಯಿಂದ ಪಂಢರಪುರ ಯಾತ್ರೆಗೆ ಪ್ರತಿ ವರ್ಷ ಕಾಲು ನಡಿಗೆಯಿಂದ ಲಕ್ಷಾಂತರ ಜನ ಆ ದೇವಸ್ಥಾನಕ್ಕೆ ಹೋಗುತ್ತಾರೆ. ನಮ್ಮ ಕರ್ನಾಟಕ ಸರ್ಕಾರದ ವತಿಯಿಂದ ಅಲ್ಲಿ ಒಂದು ಜಾಗವನ್ನು ಖರೀದಿ ಮಾಡಿ, ಒಂದು ತಂಗುದಾಣವನ್ನು ನಿರ್ಮಾಣ ಮಾಡಬೇಕೆಂದು ನಾವು ಕೇಳುತ್ತಿದ್ದೇವೆ. ತಂಗುದಾಣವನ್ನು ನಿರ್ಮಿಸಿಕೊಟ್ಟರೆ, ಪಂಡರಪುರಕ್ಕೆ ನಮ್ಮ ಕರ್ನಾಟಕ ರಾಜ್ಯದಿಂದ ಹೋಗುವ ಜನರಿಗೆ ಅಲ್ಲಿ ಉಳಿದುಕೊಳ್ಳಲಿಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಬೇರೆ ಬೇರೆ ಛತ್ರದಲ್ಲಿ ಇರುವಂಥ ಒಂದು ಪರಿಸ್ಥಿತಿ ಬಂದಿರುತ್ತದೆ.